**ದಿನಾಂಕ: 11-08-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 1ನೇ ಪ್ರತಿವಾದಿ ಪರ ಶ್ರೀಮತಿ ಎಸ್.ಪಿ. ವಕೀಲರಿಂದ**

1. ನನ್ನ ಅಜ್ಜನ ಹೆಸರು ರುದ್ರಗೌಡ ಇರುತ್ತದೆ. ನಿಮ್ಮ ಅಜ್ಜ ರುದ್ರಗೌಡನಿಗೆ ಎಷ್ಟು ಜನ ಹೆಂಡತಿಯರು ಇದ್ದರು ಎಂದರೆ ಇಬ್ಬರು ಹೆಂಡತಿಯರು ಇದ್ದರು ಎಂದು ಉತ್ತರಿಸುತ್ತಾರೆ. ಅವರುಗಳು ಶಿವಲಿಂಗಮ್ಮ ಮತ್ತು ಗಂಗೂಬಾಯಿ ಎಂದು ಇರುತ್ತದೆ. ಶಿವಲಿಂಗಮ್ಮಳಿಗೆ 3 ಜನ ಹೆಣ್ಣು ಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು ಇರುತ್ತಾರೆ. ಶಿವಲಿಂಗಮ್ಮ ತೀರಿಕೊಂಡಿರುತ್ತಾರೆ. 2ನೇ ಹೆಂಡತಿ ಗಂಗೂಬಾಯಿ ಜೀವಂತ ಇದ್ದಾರೆ. ಗಂಗೂಬಾಯಿ ನಿಮ್ಮ ಅಜ್ಜಿ ಆಗಬೇಕು ಎಂದರೆ ಸರಿ. ಗಂಗೂಬಾಯಿರವರಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಗಂಡಸು ಮಕ್ಕಳು. ಅವರುಗಳು ಅಪ್ಪಾಸಾಹೇಬಗೌಡ ಮತ್ತು ನಾಡಗೌಡ ಇರುತ್ತಾರೆ. ನಿಮ್ಮ ತಂದೆ ಅಪ್ಪಾಸಾಹೇಬಗೌಡರವರಿಗೆ ಎಷ್ಟು ಜನ ಹೆಂಡತಿಯರು ಎಂದರೆ ನಮ್ಮ ತಾಯಿ ಒಬ್ಬರೇ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿಯ ತವರು ಮನೆ ಯಾವುದು ಎಂದರೆ ಬದಲೂರು ಎಂದು ಉತ್ತರಿಸುತ್ತಾರೆ. 7ನೇ ಪ್ರತಿವಾದಿ ಕಲಾವತಿ ನಿಮ್ಮ ತಂದೆಯ 2ನೇ ಹೆಂಡತಿ ಮತ್ತು 8 ನೇ ಪ್ರತಿವಾದಿ ನಿಮ್ಮ ತಂದೆಯ 3ನೇ ಹೆಂಡತಿ ಎಂದರೆ ಇರಬಹುದು ಎಂದು ಉತ್ತರಿಸಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 7ನೇ ಪ್ರತಿವಾದಿ ಕಲಾವತಿ ಹೊಟ್ಟೆಯಿಂದ ಮಕ್ಕಳು ಹುಟ್ಟಿಲ್ಲ ಎಂದರೆ ಸರಿ. ನಿಮ್ಮ ತಂದೆಯ 3ನೇ ಹೆಂಡತಿಯಾದ ಶ್ರೀದೇವಿರವರಿಗೆ ಇಬ್ಬರು ಮಕ್ಕಳು ಅವರೆಂದರೆ ಚನ್ನಪ್ಪಗೌಡ, ದೇವಿಕಾ ಎಂದರೆ ಗೊತ್ತಿಲ್ಲ. ನಿಮ್ಮ ತಂದೆ ಅಪ್ಪಾಸಾಹೇಬಗೌಡರವರ 3ನೇ ಹೆಂಡತಿಯಾದ ಶ್ರೀದೇವಿಯ ಜೊತೆಯಲ್ಲಿ ಇರುತ್ತಾರೆ ಎಂದರೆ ನಮ್ಮ ತಾಯಿ ಆರಾಮ ಇಲ್ಲದ್ದರಿಂದ ನಮ್ಮ ಕಡೆ ಬಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಲಕ್ಷ್ಮಿಬಾಯಿರವರು ನಿಮ್ಮ ತಂದೆ ಅಪ್ಪಾಸಾಹೇಬಗೌಡರವರ ಜೊತೆಯಲ್ಲಿ ಹೆಚ್ಚು ಸಮಯ ಕಳೆದಿಲ್ಲ ಎಂದರೆ 30 ವರ್ಷಗಳವರೆಗೆ ಅಲ್ಲೇ ಇದ್ದರು ಎಂದು ಉತ್ತರಿಸುತ್ತಾರೆ.

2. ನಿಮ್ಮ ಅಜ್ಜ ರುದ್ರಗೌಡ ತಮ್ಮ ಇಬ್ಬರು ಹೆಂಡತಿಯರ ಮಕ್ಕಳ ನಡುವೆ ಆಸ್ತಿಗಳನ್ನು ಹಂಚಿಕೊಟ್ಟಿದ್ದರು ಎಂದರೆ ಸರಿ. ರುದ್ರಗೌಡನ 2ನೇ ಹೆಂಡತಿ ಗಂಗಾಬಾಯಿರವರ ಪಾಲಿಗೆ ಸ.ನಂ.304 ಮತ್ತು 293 ಬಂದಿದೆ ಎಂದರೆ ಸರಿ ಎಂದು ಉತ್ತರಿಸಿ ಇನ್ನೊಂದು ಸ.ನಂ.266 ಸಹ ಬಂದಿದೆ ಎಂದು ಉತ್ತರಿಸುತ್ತಾರೆ. ಸ.ನಂ.266 ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸೇರಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಸ.ನಂ.293/1 ರಲ್ಲಿ 10 ಎಕರೆ 18 ಗುಂಟೆ ಜಮೀನನ್ನು ನಿಮ್ಮ ತಂದೆಯವರು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಗಂಗೂಬಾಯಿಗೆ ನಿಮ್ಮ ತಂದೆ ಹಿರಿಯ ಮಗ ಇದ್ದುದ್ದರಿಂದ ಅವರೇ ಕುಟುಂಬದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಖರ್ಚು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮದುವೆ ಖರ್ಚು ವೆಚ್ಚ, ಕುಪ್ಪಸ ಕಾರ್ಯಕ್ರಮ, ಹೆರಿಗೆಯ ಖರ್ಚು, ತೊಟ್ಟಿಲು ಕಾರಣ ಮನೆತನದ ಎಲ್ಲಾ ಖರ್ಚನ್ನು ನೋಡಿಕೊಳ್ಳುವ ಸಲುವಾಗಿ ಸ.ನಂ.293/1 ರ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಲ ಏನೂ ಇದ್ದಿದ್ದಿಲ್ಲ ಎಂದು ಉತ್ತರಿಸಿ ಉದ್ದೇಶಪೂರ್ವಕವಾಗಿ ಮಾರಾಟ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಉದ್ದೇಶಪೂರ್ವಕವಾಗಿ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಿದ್ದೀರಿ ಅದರ ಬಗ್ಗೆ ನೀವು ಮುಟೇಷನನ್ನು ತಕರಾರು ಮಾಡಿದ್ದೀರಾ ಎಂದರೆ ಮಾರಾಟ ಮಾಡಿದ ಸಮಯದಲ್ಲಿ ಗೊತ್ತಾಗಿಲ್ಲ ಮಾರಾಟ ಆದ 2 ವರ್ಷಗಳ ನಂತರ ಗೊತ್ತಾಗಿ ಕೇಸ್ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. 3ನೇ ಪ್ರತಿವಾದಿಯ ಹೆಸರಿನಲ್ಲಿ ಮುಟೇಷನ್ ಮಾಡಬಾರದು ಎಂದು ತಹಸೀಲ್ ಕಚೇರಿಯಲ್ಲಿ ತಕರಾರು ಸಲ್ಲಿಸಿದ್ದೀರಾ ಎಂದರೆ ಮಾರಾಟ ಮಾಡಿದ ವಿಚಾರ ಗೊತ್ತಿದ್ದಿಲ್ಲ ನಂತರ ಕೇಸ್ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

**1ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ